ಆ) ಸಣ್ಣ ಸಣ್ಣ ನಗರದಲ್ಲಿ ಇದರಿಂದ ತೊಂದರೇ ಆಗುವುದಿಲ್ಲವೆ?

(b) Whether would it not cause hardship in small towns;

ಇ) ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

(c) Which are the steps initiated by Government to this hardship?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಹೌದು.

a) -YES-

ಆ) ಇಲ್ಲ.

b) -NO-

ಇ) ಉದ್ಭವಿಸುವುದಿಲ್ಲ.

c) Does not arise.

ವಿಷಯ :- ಅಂಕೋಲ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾಥಮಿಕ ಶಾಲೆ ಪ್ರೌಢಶಾಲೆ ಪ್ರಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1047 (1173)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) :- ಮಾನ್ಯ ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96 ಹಾಗೂ 96-97 ರಲ್ಲಿ ಸಿರ್ಸಿ, ಯಲ್ಲಾಪುರ, ಅಕೋಲಾ ತಾಲ್ಲೂಕಿನಲ್ಲಿ ಎಷ್ಟು ಹೊಸದಾಗಿ ಪ್ರಾಥಮಿಕ ಶಾಲೆ ಪ್ರೌಢಶಾಲೆಗಳು ಮಂಜೂರಾತಿ ಪಡೆದಿವೆ ತಾಲ್ಲೂಕುವಾರು ವಿವರ ನೀಡುವುದು.

ಆ) ಹೊಸದಾಗಿ ಪ್ರಾಥಮಿಕ ಹೈಸ್ಕೂಲ್ ಸ್ಥಾಪಿಸಲು ಸರ್ಕಾರದ ಷರತ್ತುಗಳೇನು?

ಇ) ಸಿರ್ಸಿ, ಯಲ್ಲಾಪುರ, ಅಂಕೋಲಾ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾಥಮಿಕ ಪ್ರೌಢಶಾಲೆ ಸ್ಥಾಪಿಸಲು ಎಷ್ಟು ಪ್ರಸ್ತಾವನೆ ಬಂದಿದೆ.

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ)

ತಾಲ್ಲೂಕು	1995-96			1996-97	
	ಸರ್ಕಾರಿ ಪ್ರಾಥಮಿಕ ಶಾಲೆ	ಖಾಸಗಿ ಪ್ರಾಥಮಿಕ ಶಾಲೆ	ಖಾಸಗಿ ಪ್ರೌಢ ಶಾಲೆ	ಸರ್ಕಾರಿ ಪ್ರಾಥಮಿಕ ಶಾಲೆ	ಸರ್ಕಾರಿ ಪ್ರೌಢಶಾಲೆ
ಅಂಕೋಲಾ	2	-	-	4	1
ಯಲ್ಲಾಪುರ	10	-	-	2	-
ಸಿರ್ಸಿ	22	2	1	2	-
ಒಟ್ಟು	34	2	1	8	1

ಸರ್ಕಾರಿ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಲು ಷರತ್ತುಗಳು ಷರತ್ತುಗಳು

1) ಪ್ರಾಥಮಿಕ ಶಾಲೆ ಪ್ರಾರಂಭಿಸುವ ಸ್ಥಳದಲ್ಲಿ ಜನಸಂಖ್ಯೆ 300 ಮಕ್ಕಳ ಸಂಖ್ಯೆ 20 ಇರಬೇಕು.

1) ಶಾಲೆಯನ್ನು ಪ್ರಾರಂಭಿಸಬೇಕೆಂದಿರುವ ಗ್ರಾಮದ ಸ್ಥಳೀಯರು ನೀಡಬೇಕಾದ ವಂತಿಗೆ ಮೊತ್ತ ರೂ.1 ಲಕ್ಷ ಚಲನನ್ನು ಲಗತ್ತಿಸಬೇಕು ಮತ್ತು ಪ್ರಯೋಗ ಶಾಲೆಗೆ ರೂ. 10,000-00 ಒದಗಿಸಬೇಕು.

2) ಸ್ಥಳೀಯರು ಶಾಲೆಗಾಗಿ ನೀಡಬೇಕಾದ ನಿವೇಶನವನ್ನು, ನಿವೇಶನದ ಬಗ್ಗೆ ಖಚಿತ ಮಾಹಿತಿ ನೀಡಬೇಕು.

ಖಾಸಗಿ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಷರತ್ತುಗಳು.

1 ರಿಂದ 4 ನೇ ತರಗತಿ ಖಾಸಗಿಯಾಗಿ ಇಲಾಖೆಯ ಪೂರ್ವಾನುಮತಿ ಇಲ್ಲದೆ ಪ್ರಾರಂಭಿಸಬಹುದಾಗಿದೆ. ಹೀಗೆ ಪ್ರಾರಂಭಿಸಿದ ಪ್ರಾಥಮಿಕ ಶಾಲೆಗಳು ಶಾಶ್ವತ ಅನುದಾನ ರಹಿತವಾಗಿರುತ್ತದೆ.

ಖಾಸಗಿ ಪ್ರೌಢಶಾಲೆ ಪ್ರಾರಂಭಿಸಲು ಷರತ್ತುಗಳು.

ಖಾಸಗಿ ಸಂಸ್ಥೆಯವರು ಶಾಲೆ ನಡೆಸಲು ಕಟ್ಟಡ ಹೊಂದಿರಬೇಕು. ರೂ. 50,000-00 ರೂ. ಸ್ಥಿರ ನಿಧಿ ಇಡಲು ಸಿದ್ದರಿರಬೇಕು. ಶಾಲೆಯ ಆವಶ್ಯಕತೆ ಇರಬೇಕು.